ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/05/ಇಸಿಎಸ್/01/2012

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ:09-04-2013

## ಸುತ್ತೋಲೆ

ವಿಷಯ: 2013 ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಾಚಾರ್ಯರು/ ಮುಖ್ಯ ಅಧೀಕ್ಷಕರು/ಮುಖ್ಯ ವೀಕ್ಷಕರು/ ಉಪಮುಖ್ಯ ಅಧೀಕ್ಷಕರು ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ:1)ಮಾನ್ಯ ಸುಪ್ರೀಂ ಕೋರ್ಟ್ ಆದೇಶ.
2)ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸೂಚನೆ.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ಮತ್ತು (2) ರ ಪ್ರಕಾರ DCET-2013 ಪರೀಕ್ಷೆಯ ಹಿನ್ನೆಲೆಯಲ್ಲಿ 2013 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳನ್ನು ಸುಗಮವಾಗಿ ನಡೆಸಿ ಸಕಾಲದಲ್ಲಿ ಫಲಿತಾಂಶ ನೀಡಲು ಪರೀಕ್ಷಾ ಕೇಂದ್ರಗಳ ಪ್ರಾಚಾರ್ಯರು/ ಮುಖ್ಯ ಅಧೀಕ್ಷಕರು/ಮುಖ್ಯ ವೀಕ್ಷಕರು/ ಉಪಮುಖ್ಯ ಅಧೀಕ್ಷಕರು ಈ ಕೆಳಕಂಡ ಕ್ರಮಗಳನ್ನು ಅನುಸರಿಸಬೇಕೆಂದು ತಿಳಿಸಲಾಗಿದೆ.ಹಾಗೂ DCET-2013 ಪರೀಕ್ಷೆಗೆ ಹಾಜರಾಗ ಬಯಸುವ ವಿದ್ಯಾರ್ಥಿಗಳು ನೀಡಬೇಕಾದ ಮಾಹಿತಿಯ ಅರ್ಜಿ ನಮೂನೆಯನ್ನು ಈ ಸುತ್ತೋಲೆಯ ಲಗತ್ತಿಸಿ ಕಳುಹಿಸಲಾಗಿದ್ದು, ಈ ಕುರಿತು ಸಂಸ್ಥೆಯ ಪ್ರಾಚಾರ್ಯರು ವಿದ್ಯಾರ್ಥಿಗಳ ಗಮನಕ್ಕೆ ತರುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಗಿದೆ.

1. 2013 ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಮುದ್ರಿಸುವುದು ದಿನಾಂಕ 20-04-2013 ರಿಂದ 29-04-2013ರ ವರೆಗೆ.

2. DCET-2013 ಪರೀಕ್ಷೆಯನ್ನು ತೆಗೆದುಕೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳಿಂದ ಮಾತ್ರ (Prospective Candidate for DCET-2013) ನಿಗಧಿತ ಅರ್ಜಿ ನಮೂನೆಯಲ್ಲಿ ಮಾಹಿತಿ ಪಡೆದು ಬಿಟಿಇ ಲಿಂಕ್ಸ್‌ನಲ್ಲಿ ಅಪ್‌ಡೇಟ್ ಮಾಡಿದ ನಂತರವಷ್ಟೇ ಪ್ರವೇಶ ಪತ್ರಗಳನ್ನು ಮುದ್ರಿಸುವುದು. (ಹಾಲಿ 6ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಈಗಾಗಲೇ ಕೋರ್ಸು ಮುಗಿಸಿದ್ದು ಬ್ಯಾಕ್‌ಲಾಗ್ ವಿಷಯಗಳಿರುವ ವಿದ್ಯಾರ್ಥಿಗಳಿಂದ ಮನವಿ ಸ್ವೀಕರಿಸಬಹುದಾಗಿದೆ.) ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿ ನೀಡದ ವಿದ್ಯಾರ್ಥಿಗಳ ಫಲಿತಾಂಶವನ್ನು CET ಪರೀಕ್ಷೆಗೆ ಮೊದಲೆ ನೀಡಲು ಸಾಧ್ಯವಿಲ್ಲವೆಂಬ ಮಾಹಿತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತಪ್ಪದೇ ತರುವುದು.

3. DCET-2013 ಪರೀಕ್ಷೆಯನ್ನು ತೆಗೆದುಕೊಳ್ಳಲು ಇಚ್ಛಿಸಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರವೇ ಸ್ವೀಕೃತಿ ಎಂದು ತಿಳಿಯುವುದು. ಪ್ರವೇಶ ಪತ್ರದ ಮೇಲೆ CET ಎಂದು ಮುದ್ರಿತವಾಗಿರುವುದನ್ನು ವಿದ್ಯಾರ್ಥಿಗಳು ಮತ್ತು ಪ್ರಿನ್ಸಿಪಾಲರುಗಳು ಗಮನಿಸುವುದು.

4. DCET-2013 ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸಿರುವ ವಿದ್ಯಾರ್ಥಿಗಳ ಕ್ರೋಢೀಕೃತ ಪಟ್ಟಿಯನ್ನು ಬಿಟಿಇ ಲಿಂಕ್ಸ್‌ನಿಂದ ಮುದ್ರಿಸಿ ಕಾರ್ಯದರ್ಶಿಯವರು ತಾಂತ್ರಿಕ ಪರೀಕ್ಷಾ ಮಂಡಳಿ ಇವರಿಗೆ ತಕ್ಷಣ ರವಾನಿಸುವುದು. ಬಿಟಿಇ ಲಿಂಕ್ಸ್‌ನಲ್ಲಿ ಆನ್‌ಲೈನ್‌ನಲ್ಲಿ ಅಪ್‌ಡೇಟ್ ಆಗದ ಮನವಿಗಳನ್ನು ಪುರಸ್ಕರಿಸಲಾಗುವುದಿಲ್ಲ ಮತ್ತು ಅಂತವರ ಫಲಿತಾಂಶಗಳನ್ನು ಸಿಟಿಇ ಪರೀಕ್ಷೆಗೆ ಮೊದಲು ಕೊಡಲು ಸಾಧ್ಯವಾಗುವುದಿಲ್ಲವೆಂಬುದನ್ನು ಪ್ರಿನ್ಸಿಪಾಲರುಗಳು ಗಂಭೀರವಾಗಿ ಗಮನಿಸುವುದು. ವಿದ್ಯಾರ್ಥಿಗಳ ಎಲ್ಲಾ ಮನವಿಗಳನ್ನು ಸಂಸ್ಥೆಯಲ್ಲಿಯೇ ಇಟ್ಟುಕೊಳ್ಳುವುದು. ಹಾಗೂ ಅಂತಹ Content slip ಮೇಲೆ CET ಎಂದು ಮುದ್ರಿತವಾಗಿರುತ್ತದೆ.

೫. DCET-2013 ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸಿರುವ ವಿದ್ಯಾರ್ಥಿಗಳ ಪಠ್ಯ ವಿಷಯವಾರು Content slip ಗಳು, ಬೇರೆಯಾಗಿ ಮುದ್ರಣ ಮಾಡುವಂತೆ ವ್ಯವಸ್ಥೆ ಮಾಡಲಾಗಿದೆ.

೬. DCET-2013 ತೆಗೆದು ಕೊಳ್ಳಲು ಇಚ್ಛಿಸಿರುವ ವಿದ್ಯಾರ್ಥಿಗಳ (Content slip ಪ್ರಕಾರ) ಉತ್ತರ ಪತ್ರಿಕೆಗಳನ್ನು Appearance statement ನ ಒಂದು ಜೆರಾಕ್ಸ್ ಪ್ರತಿಯೊಡನೆ ಪ್ರತ್ಯೇಕ ಪ್ಯಾಕೆಟ್‌ನಲ್ಲಿಟ್ಟು, ಅದಕ್ಕೆ ಸಂಬಂಧಪಟ್ಟ Content slip ಅಂಟಿಸಿ ಸೀಲು ಮಾಡುವುದು. DCET-2013 ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲಾ ಪ್ಯಾಕೆಟ್‌ಗಳನ್ನು ಪ್ರತ್ಯೇಕ *ಕೆಂಪು ಬಟ್ಟೆಯ* ಬ್ಯಾಗಿನಲ್ಲಿರಿಸಿ ಸೀಲು ಮಾಡಿ ಮತ್ತು ಉಳಿದ ಎಲ್ಲಾ ಪ್ಯಾಕೆಟ್‌ಗಳನ್ನು (Sessionwise) ಬಿಳಿ ಬಟ್ಟೆಯ ಬ್ಯಾಗಿನಲ್ಲಿರಿಸಿ ಸೀಲು ಮಾಡಿ ಬೇರೆ ಬೇರೆಯಾಗಿಯೇ ಕವರಿಂಗ್ ಲೆಟರ್‌ನಲ್ಲಿ ಕಾರ್ಯದರ್ಶಿಯವರಿಗೆ ರವಾನಿಸುವುದು. ಈ ರೀತಿ ಬೇರೆಯಾಗಿ ರವಾನಿಸಿರುವುದರಿಂದ DCET ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಬೇಗನೆ ಮೌಲ್ಯಮಾಪನ ಮಾಡಿಸಿ ಫಲಿತಾಂಶ ಪ್ರಕಟಿಸಲು ಅನುಕೂಲವಾಗುತ್ತದೆ. ಪ್ರತಿ Session ಗೆ ಎರಡು ಬಂಡಲ್‌ಗಳನ್ನು ಮಾಡಬೇಕಾಗಿರುತ್ತದೆ ಎಂಬುದನ್ನು ಗಮನಿಸುವುದು. (ಕೆಂಪು ಬಂಡಲ್-ಸಿಇಟಿ, ಬಿಳಿ ಬಂಡಲ್-ನಾನ್ ಸಿಇಟಿ)

7. ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷಾ ದುರಾಚಾರ ಮತ್ತು ಅದರ ಪರಿಣಾಮಗಳು ಹಾಗೂ DCET-2013 ಪರೀಕ್ಷೆಯ ಸಂಭಾವ್ಯ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ಮುದ್ರಿಸುವ ಮೊದಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಮತ್ತು ಪ್ರವೇಶ ಪತ್ರಗಳನ್ನು ಪಡೆಯುವಾಗ ಅದರ ಮೇಲೆ CET ಎಂದು ಮುದ್ರಿತವಾಗಿರುವುದನ್ನು ಖಾತರಿಪಡಿಸಿಕೊಂಡು, ಇಲ್ಲದಿದ್ದ ಪಕ್ಷದಲ್ಲಿ ತಕ್ಷಣವೇ ಪ್ರಾಂಶುಪಾಲರ ಗಮನಕ್ಕೆ ತರುವಂತೆ ಅರಿವು ಮೂಡಿಸುವ ಕಾರ್ಯಾಗಾರ ನಡೆಸುವುದು.

೮. DCET-2013 ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು ತಮ್ಮ ಫಲಿತಾಂಶ ಬಂದ ತಕ್ಷಣ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ ಜೊತೆಗೇ ಫೋಟೋ ಕಾಪಿಯನ್ನು ಪಡೆದುಕೊಳ್ಳಬಹುದಾಗಿರುತ್ತದೆ. ಫೋಟೋ ಕಾಪಿಗೆ ಅರ್ಜಿ ಸಲ್ಲಿಸಿ, ಫೋಟೋ ಕಾಪಿ ಪಡೆದ ನಂತರ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಸಮಯದ ಅಭಾವದಿಂದ ಅವಕಾಶವಿರುವುದಿಲ್ಲ.

10/4
ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ
ಬೆಂಗಳೂರು

ಪ್ರತಿ:
1. ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ - ಮಾಹಿತಿಗಾಗಿ.
೨. ಐ - ಕಡತಕ್ಕೆ.
3. ಗಣಕೀಕರಣ ಭಾಗಕ್ಕೆ.

ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಕಾರ್ಯದರ್ಶಿಯವರ ಕಛೇರಿ, ತಾಂತ್ರಿಕ ಪರೀಕ್ಷಾ ಮಂಡಳ,ಅರಮನೆ ರಸ್ತೆ, ಬೆಂಗಳೂರು-560001

## DCET-2013ರ ಪರೀಕ್ಷೆಗೆ ಹಾಜರಾಗ ಬಯಸುವ ವಿದ್ಯಾರ್ಥಿಗಳು ನೀಡಬೇಕಾದ ಮಾಹಿತಿ

(ಪ್ರಿನ್ಸಿಪಾಲರ ಮುಖಾಂತರ)

1. ಅಭ್ಯರ್ಥಿಯ ಹೆಸರು:

2.ನೋಂದಣಿ ಸಂಖ್ಯೆ:

3.ಪಾಲಿಟೆಕ್ನಿಕ್ ಸಂಸ್ಥೆ ಕೋಡ್ ಮತ್ತು ಹೆಸರು

5.ಬಿಟಿಇ ಲಿಂಕ್ಸ್‌ನಲ್ಲಿ ಅಪ್‌ಡೇಟ್ ಮಾಡಿದ ದಿನಾಂಕ: / /

ಮತ್ತು **BTE Linx User ID**

(ಪಾಲಿಟೆಕ್ನಿಕ್, ಕಛೇರಿ ಉಪಯೋಗಕ್ಕಾಗಿ)

ಮೇಲೆ ನೀಡಿರುವ ಮಾಹಿತಿಗಳು ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ದೃಢೀಕರಿಸಿದೆ. ತಪ್ಪು ಮಾಹಿತಿಗೆ ನಿಯಮಾನುಸಾರ ಕಾನೂನು ಕ್ರಮಕ್ಕೆ ಬದ್ಧನಾಗಿರುತ್ತೇನೆ.

ದಿನಾಂಕ: ಪ್ರಾಚಾರ್ಯರ ಸಹಿ ಮತ್ತು ಮೊಹರು ಅಭ್ಯರ್ಥಿಯ ಸಹಿ